ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೬೧	ಬೆಂಗಳೂರು, ಬುಧವಾರ, ೦೮, ಜುಲೈ, ೨೦೨೬ (ಆಷಾಢ, ೧೭, ಶಕವರ್ಷ, ೧೯೪೮)	ಸಂಚಿಕೆ ೧೩೨
Volume 161	BENGALURU,WEDNESDAY, 08, JULY, 2026 (ASHADHA, 17, SHAKAVARSHA, 1948)	Issue 132

ಭಾಗ ೩
ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾಡಳಿತ ಭವನ, ಶಿಡ್ಲಘಟ್ಟ ರಸ್ತೆ, ಚಿಕ್ಕಬಳ್ಳಾಪುರ ಜಿಲ್ಲೆ - 562101

OFFICE OF THE DEPUTY COMMISSIONER, ZILLADALITHA BHAVANA, SHIDLAGHATTA ROAD, CHIKKABALLAPURA DISTRICT - 562101 (KARNATAKA)

ಸಂ: ಎಮ್.ಐ.ಎನ್/ ಸಿ.ಆರ್/ ಕ್ರಷರ್ ಅಧಿಸೂಚನೆ-02/ 2026-27 **ದಿನಾಂಕ:- 03/07/2026**

: ಅಧಿಸೂಚನೆ :

ವಿಷಯ:- ಕರ್ನಾಟಕ ಕಲ್ಲು ಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ-2011 ರನ್ವಯ ಚಿಕ್ಕಬಳ್ಳಾಪುರ ಜಿಲ್ಲೆ ವ್ಯಾಪ್ತಿಯಲ್ಲಿ ಕ್ರಷರ್ ಸುರಕ್ಷಿತ ವಲಯ ಘೋಷಿಸುವ ಬಗ್ಗೆ.

ಉಲ್ಲೇಖ:- ದಿನಾಂಕ :-26/03/2026 ರಂದು ನಡೆದ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣ ಪ್ರಾಧಿಕಾರದ ಸಭೆಯ ನಡವಳಿಯಂತೆ

@@@@

ಕರ್ನಾಟಕ ಕ್ರಷರ್ ಘಟಕಗಳ (ಕ್ರಷರ್) ನಿಯಂತ್ರಣ ಅಧಿನಿಯಮ-2011 ರ ಕಲಂ-3(1) ರಂತೆ ಕ್ರಷರ್ ಪರವಾನಿಗೆ ಕೋರಿ ನಮೂನೆ 'ಎ' ಮತ್ತು 'ಎ1' ರಲ್ಲಿ ಅರ್ಜಿಯನ್ನು ಸಲ್ಲಿಸಿ, ಕಲಂ-6(3) ರಂತೆ ಕಂದಾಯ, ಅರಣ್ಯ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳಿಂದ ಜಂಟಿ ಸ್ಥಳ ತಪಾಸಣೆಯನ್ನು ಕೈಗೊಂಡು, ಕಲಂ-6(1) ರಂತೆ ಕ್ರಷರ್ ಸುರಕ್ಷಿತ ವಲಯ ಘೋಷಿಸಲು ನಿಗಧಿಪಡಿಸಿರುವ ಷರತ್ತುಗಳನ್ನು ಪೂರೈಸುತ್ತಿರುವ ಕೆಳಕಂಡ ಅರ್ಜಿತ ಪ್ರದೇಶವನ್ನು ದಿನಾಂಕ:-26/03/2026 ರಂದು ನಡೆದ ಜಿಲ್ಲಾ ಕ್ರಷರ್ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣ ಪ್ರಾಧಿಕಾರದ ಸಭೆಯ ನಿರ್ಣಯದಂತೆ, ಕರ್ನಾಟಕ ಕ್ರಷರ್

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಘಟಕಗಳ (ಕ್ರಷರ್) ನಿಯಂತ್ರಣ ಅಧಿನಿಯಮ-2011 ರ ಕಲಂ-6(3) ರಂತೆ ಕ್ರಷರ್ ಸುರಕ್ಷಿತ ವಲಯವೆಂದು ಘೋಷಿಸಲಾಗಿರುತ್ತದೆ.

ಕ್ರ.ಸಂ	ಕ್ರಷರ್ ಪರವಾನಿಗೆ ಅರ್ಜಿದಾರರ ಹೆಸರು	ತಾಲ್ಲೂಕು	ಗ್ರಾಮ	ಸ.ನಂ	ವಿಸ್ತೀರ್ಣ	ಜಮೀನಿನ ವಿವರ
01	ಮೆ|| ಎಮ್.ಎಮ್ ಸ್ಟೋನ್ ಅಗ್ರಿಗೇಟ್ಸ್	ಗುಡಿಬಂಡೆ	ವರ್ಲಕೊಂಡ	168	2-05 ಎಕರೆ	ಸರ್ಕಾರಿ

ಈ ಅಧಿಸೂಚನೆಯು ಅಸ್ತಿತ್ವದಲ್ಲಿರುವ ಕಂದಾಯ, ಅರಣ್ಯ, ಪರಿಸರ ಹಾಗೂ ಕರ್ನಾಟಕ ಕ್ರಷರ್ ಘಟಕಗಳ ಲೈಸೆನ್ಸಿಂಗ್ ಹಾಗೂ ನಿಯಂತ್ರಣ ಕಾಯ್ದೆಗಳ/ನಿಯಮಗಳ ಷರತ್ತುಗಳಿಗೆ ಮತ್ತು ಸರ್ಕಾರದಿಂದ ಕಾಲಕಾಲಕ್ಕೆ ಜಾರಿಯಾಗುವ ಆದೇಶಗಳು, ಸುತ್ತೋಲೆಗಳು, ಮಾರ್ಗಸೂಚಿಗಳು ಹಾಗೂ ನ್ಯಾಯಾಲಯಗಳ ಆದೇಶಗಳು ಮತ್ತು ಕ್ರಷರ್ ಘಟಕಗಳಿಗೆ ಸಂಬಂಧಿಸಿದಂತೆ ಇತರೇ ಇಲಾಖೆಗಳಿಂದ ಜಾರಿಯಾಗುವ ಆದೇಶಗಳಿಗೆ ಒಳಪಟ್ಟಿದ್ದು, ಕಂದಾಯ/ ಅರಣ್ಯ ಇಲಾಖೆಗಳ ದಾಖಲೆಗಳಲ್ಲಿ ಯಾವುದೇ ವ್ಯತ್ಯಾಸ ಕಂಡು ಬಂದಲ್ಲಿ ಯಾವುದೇ ರೀತಿಯ ಮುನ್ಸೂಚನೆಯನ್ನು ನೀಡದೆ ಅಧಿಸೂಚನೆಯನ್ನು ರದ್ದುಗೊಳಿಸುವ ಷರತ್ತಿಗೊಳಪಟ್ಟಿರುತ್ತದೆ.

ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಜಿಲ್ಲಾ ಕ್ರಷರ್ ಘಟಕಗಳ ಲೈಸೆನ್ಸಿಂಗ್
ಹಾಗೂ ನಿಯಂತ್ರಣ ಪ್ರಾಧಿಕಾರ
ಚಿಕ್ಕಬಳ್ಳಾಪುರ ಜಿಲ್ಲೆ

PR-946

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59.

MADESHWARA NARASIMHA MURTHY JAYASIMHA